ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) ಶ್ರೀ ಬಿ.ಬಿ. ನಿಂಗಯ್ಯ (ಪಶು ಸಂಗೋಪನಾ ರಾಜ್ಯ ಸಚಿವರು) ಅವರು :—

1984ರ ಕರ್ನಾಟಕ ವೆಟರಿನರಿ ಕೌನ್ಸಿಲ್ ಅಧಿನಿಯಮದ 65(3)ನೇ ಪ್ರಕರಣದ ಮೇರೆಗೆ :

67. 1988ರ ಕರ್ನಾಟಕ ವೆಟರಿನರಿ ಕೌನ್ಸಿಲ್ ನಿಯಮಾವಳಿಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 2-6-1998ರಂದು ಹೊರಡಿಸಲಾದ ಎಹೆಚ್‌ಎಫ್ 210 ವೀಟಿ 94ನೇ ಕ್ರಮಾಂಕದ ಅಧಿಸೂಚನೆ;

(6) ವರದಿಗಳನ್ನು ಒಪ್ಪಿಸುವುದು :

ಶ್ರೀ ಜಿ.ಬಿ. ಶಿವಕುಮಾರ್ (ಅಧ್ಯಕ್ಷರು, ಜಂಟಿ ಸದನ ಸಮಿತಿ) :— ರಾಜ್ಯಾದ್ಯಂತ ಬೆಳೆಗಳು ನಾಶವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡರೆಂಬ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ಜಂಟಿ ಸದನ ಸಮಿತಿಯ ಅಂತಿಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಸನ್ಮಾನ್ಯ ಅಧ್ಯಕ್ಷರೆ, ಜಂಟಿ ಸದನ ಸಮಿತಿ ಸದಸ್ಯನಾದ ನಾನು ತುಮಕೂರು ಜಿಲ್ಲೆ ಶಿರಾ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ನಿಂದಾಗಿ ಉಂಟಾದ ಸಾವು ನೋವುಗಳ ಬಗ್ಗೆ ಪರಿಶೀಲಿಸಿ ಇಂಥ ಘಟನೆ ಇನ್ನು ಮುಂದೆ ಮರುಕಳಿಸದಂತೆ ಪರಿಹಾರೋಪಾಯಗಳನ್ನು ಸೂಚಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಜಂಟಿ ಸದನ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಅಧ್ಯಕ್ಷರು, ಅಂದಾಜುಗಳ ಸಮಿತಿ) :— ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಮೂರು ಮತ್ತು ನಾಲ್ಕನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ಎಲ್ಲಾ ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.

(7) ಪ್ರಕಟಣೆ.

ಅಧ್ಯಕ್ಷರು :— ದಿನಾಂಕ 8ನೇ ಮಾರ್ಚ್ 1999ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ 9ನೇ ಮಾರ್ಚ್ 1999 ರಿಂದ 31ನೇ ಮಾರ್ಚ್ 1999ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.